# ಕುರುಡನ ಹೆಗಲ ಮೇಲೆ ಕೂತ ಹೆಳವನ ಡಾನ್ಸಿಗೆ ವ್ಯೂಸ್ ಬರುವುದೆಷ್ಟೋ ನೋಡಬೇಕು

## ಕೊರೊನೋತ್ತರ ಕಾಲದಲ್ಲಿ ಕನ್ನಡ ಚಿತ್ರರಂಗ ಮರಳಿ ಹಳಿಗೆ ಬರುವುದೇ?

■ ಪದ್ಮನಾಭ ಭಟ್



'ಯುವರತ್ನ' ಚಿತ್ರದಲ್ಲಿ ಪುನೀತ್

ಬೆಳ್ಳಿತೆರೆಯ ಮೇಲೆ ದೂಳು ಕೂತಿದೆ. ಬಣ್ಣದ ಲೋಕವನ್ನು ಅನಾವರಣಗೊಳಿಸುತ್ತಿದ್ದ ಚಿತ್ರಮಂದಿರಗಳಲ್ಲಿ ನಿರ್ಜನ ಕತ್ತಲು ತುಂಬಿ ಅವು ಬೃಹತ್ ಗೋರಿಗಳಂತೆಯೇ ಭಾಸವಾಗುತ್ತಿವೆ. ಚಂದನವನದ ಗೇಟಿಗೆ ಚಿಲಕ ಬಿದ್ದು ಎರಡು ತಿಂಗಳು ಕಳೆಯುತ್ತಿದೆ. ದೂರದಲ್ಲೆಲ್ಲೋ ಚಿತ್ರೋದ್ಯಮ ಮತ್ತೆ ಆರಂಭಗೊಳ್ಳುವ ಸೂಚನೆಗಳೂ ಗೋಚರಿಸುತ್ತಿವೆ. ಈ ತಿಂಗಳ ಕೊನೆಯ ವಾರದಿಂದ ಕಿರುತೆರೆಯ ಒಳಾಂಗಣ ಚಿತ್ರೀಕರಣ ನಡೆಸಲು ಸಿದ್ಧತೆಗಳು ನಡೆದಿವೆ. ಚಿತ್ರರಂಗದವರಿಗೂ, ಚಿತ್ರೀಕರಣ ಹೊರತುಪಡಿಸಿ ಉಳಿದ ಕೆಲಸಗಳನ್ನು ಮಾಡಲು ಅನುಮತಿ ಸಿಕ್ಕಿದೆ. ಅಂದರೆ ಹಿರಿಪರದೆಯ ಮೇಲೆ ಬೆಳಕು ಹರಿಯುವ ಕಾಲ ಹತ್ತಿರವಾಗುತ್ತಿದೆ.

ಆದರೆ ಎಷ್ಟೋ ಕಾಲದ ನಂತರ ಹರಿಯುತ್ತಿರುವ ಈ ಪ್ರಖರ ಬೆಳಕನ್ನು ಭರಿಸುವ ಶಕ್ತಿ ಆ ಪುರಾತನ ಪರದೆಗೆ ಉಳಿದಿದೆಯೇ? ನಿಶ್ಚಿತವಾಗಿಯೂ ಇದು ಚಿತ್ರರಂಗದ ಪಾಲಿಗೆ ಸಂಕ್ರಮಣ ಕಾಲ. ಸಂಕ್ರಮಣವೆಂದರೆ ಬಹುದೊಡ್ಡ ಬದಲಾವಣೆ; ಅದು ಒಳ್ಳೆಯ ರೂಪದಲ್ಲಿಯೇ ಇರಬೇಕೆಂದೇನೂ ಇಲ್ಲ.

ಕಳೆದ ಕೆಲವು ವರ್ಷಗಳಿಂದ ಕನ್ನಡ ಚಿತ್ರರಂಗವನ್ನು ಬಹುವಾಗಿ ಕಾಡುತ್ತಿದ್ದ ಸಮಸ್ಯೆಗಳೆಂದರೆ ಚಿತ್ರಮಂದಿರಗಳ ಕೊರತೆ ಮತ್ತು ಪರಭಾಷಾ ಚಿತ್ರಗಳ ದಾಳಿ. ಇತ್ತೀಚೆಗೆ ಡಬ್ಬಿಂಗ್ ಎಂಬ ಕೇರೆಹಾವೂ ಕಾನೂನಿನ ಬಲ ಪಡೆದು ವಿಷಸರ್ಪವಾಗಿ ಬಡ್ತಿ ಹೊಂದಿ ಭುಸುಗುಡಲು ಶುರುವಾಗಿತ್ತು. ವರ್ಷಕ್ಕೆ ಇನ್ನೂರಕ್ಕೂ ಮಿಕ್ಕಿ ಬಿಡುಗಡೆಯಾಗುತ್ತಿದ್ದ ಸಿನಿಮಾಗಳಲ್ಲಿ ಗೆಲುವಿನ ಗೆರೆ ದಾಟುತ್ತಿದ್ದ ಸಿನಿಮಾಗಳ ಸಂಖ್ಯೆ, ಒಂದು ಕೈ ಬೆರಳುಗಳನ್ನೂ ಪೂರ್ತಿಯಾಗಿ ಮಡಿಸುವಷ್ಟಿರಲಿಲ್ಲ.

'ಲಾಕ್‌ಡೌನ್ ಮುಗಿದ ಮೇಲೆ ಚಿತ್ರರಂಗ ಮತ್ತೆ ಚಿಗಿತುಕೊಳ್ಳುತ್ತದೆ' ಎನ್ನುವವರ ಮನಸಲ್ಲಿರುವುದು ರಾಜ್‌ಕುಮಾರ್ ಅಪಹರಣದ ಸಂದರ್ಭದ ನೆನಪು. ಆಗ ನೂರು ದಿನಗಳ ಕಾಲ ಚಿತ್ರರಂಗ ಸ್ಥಗಿತಗೊಂಡಿತ್ತು. ಆದರೆ ನಂತರ ಮತ್ತೆ ಮೊದಲಿನ ಹಾಗೇ ಚಿಗಿತುಕೊಂಡಿತ್ತು. ಆದರೆ ಆ ಕಾಲಕ್ಕೂ ಈ ಸಂದರ್ಭಕ್ಕೂ ಬಹುವ್ಯತ್ಯಾಸವಿದೆ.

ಲಾಕ್‌ಡೌನ್‌ನಲ್ಲಿ ಸಿನಿಮಾ ನೋಡುವ ವರ್ಗ ವಿಸ್ತರಣೆಯಾಗಿದೆ. ಆದರೆ ಇದು ಚಿತ್ರರಂಗಕ್ಕೆ ಶುಭಸೂಚನೆಯೇನೂ ಅಲ್ಲ. ಯಾಕೆಂದರೆ ಈ ವಿಸ್ತರಣೆಯಾದ ವರ್ಗವೆಲ್ಲ ನೆಚ್ಚಿಕೊಂಡಿರುವುದು ಆನ್ಲೈನ್ ಫ್ಲಾಟ್‌ಫಾರಂಗಳನ್ನು. ತಿಂಗಳಿಗಿಂತಿಷ್ಟು ಎಂದು ಪಾವತಿಸಿ ಅಮೇಜಾನ್ ಪ್ರೈಮ್, ನೆಟ್‌ಫ್ಲಿಕ್ಸ್, ಹಾಟ್‌ಸ್ಟಾರ್ ಹೀಗೆ ವಿವಿಧ ಪ್ಲ್ಯಾಟ್‌ಫಾರಂಗಳಲ್ಲಿ ಅಸಂಖ್ಯ ಆಯ್ಕೆಗಳಲ್ಲಿ ಇಷ್ಟವಾದದ್ದನ್ನು ಆಯ್ದು, ಹೊರಜಗತ್ತಿನಿಂದ 'ಸಾಮಾಜಿಕ ಅಂತರ' ಕಾಯ್ದುಕೊಂಡು ಸಿನಿಮಾ ನೋಡುವ ಜಾಯಮಾನಕಕ್ಕೆ ಬಹುತೇಕರು ಒಗ್ಗಿಕೊಂಡಿದ್ದಾರೆ. ಇನ್ನು ದೇಶದ ಆರ್ಥಿಕ ಪರಿಸ್ಥಿತಿ ನೆಲಕಚ್ಚಿರುವಾಗ ಕೆಳಮಧ್ಯಮವರ್ಗ ಮತ್ತು ಬಡವರಿಗೆ ಚಿತ್ರಮಂದಿರಕ್ಕೆ ಬರುವುದು ಆದ್ಯತೆಯ ಆಯ್ಕೆಯಂತೂ



'ಕೆಜಿಎಫ್ 2' ಚಿತ್ರದಲ್ಲಿ ಯಶ್







'ಪೊಗರು' ಚಿತ್ರದ ಪೋಸ್ಟರ್